Akashvani : Bangalore
National Bulletin In Kannada
15.06.2024: 7.35AM
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

15.06.2024: 7.35AM
*****

**ಮುಖ್ಯಾಂಶಗಳು:**

1. ಜಿ-೭ ಶೃಂಗಸಭೆ; ಜಾಗತಿಕ ದಕ್ಷಿಣ ಹಾಗೂ ಆಫ್ರಿಕಾದ ಸಮಸ್ಯೆಗಳಿಗೆ ಆದ್ಯತೆ ನೀಡುವಂತೆ ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ
2. ದ್ವಿಪಕ್ಷೀಯ ಸಂಬಂಧ ಬಲವರ್ಧನೆಗೆ ಇಟಲಿ, ಬ್ರಿಟನ್ ಸೇರಿ ಹಲವು ಜಾಗತಿಕ ನಾಯಕರೊಂದಿಗೆ ಪ್ರಧಾನಿ ಸಭೆ
3. ೧೮ನೇ ಆವೃತ್ತಿಯ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ-೨೦೨೪ಕ್ಕೆ ಇಂದು ಚಾಲನೆ; ೫೯ ರಾಷ್ಟ್ರಗಳಿಂದ ೩೧೪ ಚಲನಚಿತ್ರಗಳ ಪ್ರದರ್ಶನ
4. ಐಸಿಸಿ ಪುರುಷರ ಟಿ ೨೦ ವಿಶ್ವಕಪ್ ಕ್ರಿಕೆಟ್; ಎ ಗುಂಪಿನಿಂದ ೮ರ ಘಟ್ಟಕ್ಕೆ ಮೊದಲ ಬಾರಿಗೆ ತಲುಪಿದ ಅಮೆರಿಕ

*****

ಜಾಗತಿಕ ದಕ್ಷಿಣ, ಹಾಗೂ ವಿಶೇಷವಾಗಿ ಆಫ್ರಿಕಾದ ಸಮಸ್ಯೆಗಳಿಗೆ ಆದ್ಯತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಜಾಗತಿಕ ನಾಯಕರಿಗೆ ಕರೆ ನೀಡಿದ್ದಾರೆ. ನಿನ್ನೆ ಇಟಲಿಯ ಅಪುಲಿಯಾದಲ್ಲಿ ನಡೆದ ಜಿ೭ ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಆಫ್ರಿಕಾದ ಸಮೂಹ ರಾಷ್ಟ್ರಗಳು ತನ್ನ ಅಧ್ಯಕ್ಷತೆಯಲ್ಲಿ ನಡೆದ ಜಿ೨೦ ಖಾಯಂ ಸದಸ್ಯನಾಗಿ ಸೇರ್ಪಡೆಗೊಂಡಿರುವುದು ಭಾರತಕ್ಕೆ ಗೌರವದ ವಿಷಯ ಎಂದು ಎಂದರು. ಭಾರತದ ಲೈಫ್ ಮಿಷನ್‌ಅನ್ನು ಉಲ್ಲೇಖಿಸಿದ ಅವರು, ವಿಶ್ವ ಪರಿಸರ ದಿನದಂದು ಅವರು ಚಾಲನೆ ನೀಡಿರುವ "ಪ್ಲಾಂಟ್ ೪ ¡ದರ್" 'ಏಕ್ ಪೆಡ್ ಮಾ ಕೆ ನಾಮ್' ಮರ-ನೆಡುವ ಅಭಿಯಾನದಲ್ಲಿ ಭಾಗವಹಿಸಲು ಜಾಗತಿಕ ಸಮುದಾಯಕ್ಕೆ ಕರೆ ನೀಡಿದರು. "ಎಲ್ಲರಿಗೂ ಏಐ' ಎಂಬ ಭಾರತದ ಕೃತಕ ಬುದ್ಧಿಮತ್ತೆ ಕುರಿತು ಮಾತನಾಡುತ್ತಾ, ಈ ತಂತ್ರಜ್ಞಾನ ಎಲ್ಲರ ಪ್ರಗತಿ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಗುರಿಯನ್ನು ಹೊಂದಿರಬೇಕು. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಸಹಯೋಗವನ್ನು ಬೆಳೆಸಲು ಭಾರತ ಕಾರ್ಯೋನ್ಮುಖವಾಗಿದೆ ಎಂದು ಅವರು ಒತ್ತಿ ಹೇಳಿದರು. ಜಿ-೭ ರಾಷ್ಟ್ರಗಳ ಗುಂಪು ೫೦ ನೇ ವಾರ್ಷಿಕೋತ್ಸವ ಆಚರಿಸುತ್ತಿರುವುದಕ್ಕೆ ಪ್ರಧಾನಿ ಅಭಿನಂದಿಸಿದರು. ಅತಿದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರದ ಪ್ರಧಾನಿಯಾಗಿ ಮರು ಆಯ್ಕೆಯಾದ ನಂತರ ಶೃಂಗಸಭೆಯಲ್ಲಿ ಪಾಲ್ಗೊಳ್ಳುತ್ತಿರುವುದು ತಮಗೆ ಅತೀವ ತೃಪ್ತಿ ತಂದಿದೆ ಎಂದ ಅವರು, ತಂತ್ರಜ್ಞಾನ ಯಶಸ್ವಿಯಾಗಬೇಕಾದರೆ ಮಾನವ ಕೇಂದ್ರಿತ ವಿಧಾನ ಅನುಸರಿಸಬೇಕು ಎಂದರು. ಸಾರ್ವಜನಿಕ ಸೇವೆಯ ವಿತರಣೆಗಾಗಿ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಭಾರತ ಕಂಡಿರುವ ಯಶಸ್ಸನ್ನು ಅವರು ಸಭೆಯಲ್ಲಿದ್ದ ಜಾಗತಿಕ ನಾಯಕರೊಂದಿಗೆ ಹಂಚಿಕೊಂಡರು.

*****

ಜಿ೭ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಮುಖ ಜಾಗತಿಕ ನಾಯಕರೊಂದಿಗೆ ನಿನ್ನೆ ದ್ವಿಪಕ್ಷೀಯ ಸಭೆ ನಡೆಸಿದರು. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ, ರಕ್ಷಣೆ ಮತ್ತು ಭದ್ರತಾ ಸಹಕಾರದ ಕುರಿತಂತೆ ಹಲವು ಪ್ರಮುಖ ವಿಷಯಗಳ ಕುರಿತು ಚರ್ಚಿಸಿದರು. ರಕ್ಷಣಾ ಕೈಗಾರಿಕಾ ಕ್ಷೇತ್ರದಲ್ಲಿ ಉಭಯ ರಾಷ್ಟ್ರಗಳ ಸಹಯೋಗವನ್ನು ಮತ್ತಷ್ಟು ಬಲಪಡಿಸುವ ಭರವಸೆಯನ್ನು ಈ ವೇಳೆ ವ್ಯಕ್ತಪಡಿಸಲಾಯಿತು. ಇದೇ ವೇಳೆ ಉಭಯ ನಾಯಕರು ಭಾರತ-ಇಟಲಿ ಕಾರ್ಯತಂತ್ರದ ಸಹಭಾಗಿತ್ವದ ಪ್ರಗತಿಯನ್ನು ಪರಿಶೀಲಿಸಿದರು. ದೃಢವಾದ ಪೂರೈಕೆ ಸರಪಳಿಯನ್ನು ಖಚಿತಪಡಿಸಲು ಶಕ್ತಿ, ಉತ್ಪಾದನೆ, ಬಾಹ್ಯಾಕಾಶ, ವಿಜ್ಞಾನ ಮತ್ತು ತಂತ್ರಜ್ಞಾನ, ಟೆಲಿಕಾಂ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ವಾಣಿಜ್ಯ ಸಹಕಾರವನ್ನು ವಿಸ್ತರಿಸಲು ಅವರು ಕರೆ ನೀಡಿದರು. ಇಟಲಿ ಪ್ರಧಾನಿ ಜಾರ್ಜಿಯ ಮೆಲೋನಿ ಅವರು ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು

ಅಭಿನಂದಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಜಪಾನ್ ಪ್ರಧಾನಮಂತ್ರಿ ಫುಮಿಯೋ ಕಿಶಿಡಾ ಅವರೊಂದಿಗೂ ದ್ವಿಪಕ್ಷೀಯ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ತಮ್ಮ ಮೂರನೇ ಅವಧಿಯಲ್ಲೂ ಜಪಾನ್‌ನೊಂದಿಗಿನ ದ್ವಿಪಕ್ಷೀಯ ಸಂಬಂಧಗಳಿಗೆ ಆದ್ಯತೆ ನೀಡಲಾಗುವುದು. ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಯೋಜನೆ ಸೇರಿದಂತೆ ಹಲವು ಪ್ರಮುಖ ವಲಯಗಳಲ್ಲಿ ಭಾರತ ಮತ್ತು ಜಪಾನ್ ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಮಂತ್ರಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೇರಿದಂತೆ ವಿಶ್ವದ ನಾಯಕರನ್ನು ಭೇಟಿಯಾದರು. ಜಾಗತಿಕ ಒಳಿತಿಗಾಗಿ ಭಾರತ ಮತ್ತು ಯುಎಸ್ ಒಟ್ಟಾಗಿ ಕೆಲಸ ಮಾಡುತ್ತವೆ ಎಂದು ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಪ್ರಧಾನಿ ಮೋದಿ ಅವರು ಯುಎನ್ ಸೆಕ್ರೆಟರಿ ಜನರಲ್ ಆಂಟೋನಿಯೊ ಗುಟೆರಸ್, ಬ್ರೆಜಿಲ್ ಅಧ್ಯಕ್ಷ ಲುಲಾ ಡಾ ಸಿಲ್ವಾ, ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್, ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು ಭೇಟಿಯಾದರು. ಜಿ-೭ ಶೃಂಗಸಭೆಯಲ್ಲಿ ಭಾರತ ಭಾಗವಹಿಸುತ್ತಿರುವುದು ಇದು ೧೧ನೇ ಬಾರಿ. ಅಲ್ಲದೇ ಪ್ರಧಾನಿ ಅವರು, ಸತತ ೫ನೇ ಬಾರಿಗೆ ಈ ಶೃಂಗಸಭೆಯಲ್ಲಿ ಭಾಗವಹಿಸುತ್ತಿದ್ದಾರೆ ಭಾರತವಲ್ಲದೆ, ಅಲ್ಜೀರಿಯಾ, ಅರ್ಜೆಂಟೀನಾ, ಬ್ರೆಜಿಲ್, ಈಜಿಪ್ಟ್, ಕೀನ್ಯಾ, ಮಾರಿಟಾನಿಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಟುನೀಶಿಯಾ, ಟರ್ಕಿ, ಯುಎಇ ಶೃಂಗಸಭೆಯಲ್ಲಿ ಪಾಲ್ಗೊಂಡಿವೆ.

*****

೧೮ನೇ ಆವೃತ್ತಿಯ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ-೨೦೨೪ಕ್ಕೆ ಇಂದು ಚಾಲನೆ ದೊರೆಯಲಿದೆ. ಮುಂಬೈನಲ್ಲಿ ನಡೆಯುತ್ತಿರುವ ೭ ದಿನಗಳ ಈ ಚಲನ ಚಿತ್ರೋತ್ಸವದಲ್ಲಿ ೫೯ ರಾಷ್ಟ್ರಗಳಿಂದ ೬೧ ಭಾಷೆಗಳ ૩೧೪ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ. ದೇಶಾದ್ಯಂತ ಚಲನಚಿತ್ರೋತ್ಸವದ ಪ್ರದರ್ಶನಗಳನ್ನು ಆಸಕ್ತರು ಕಣ್ತುಂಬಿಕೊಳ್ಳಲು ಮುಂಬೈ ಅಲ್ಲದೆ ದೆಹಲಿ, ಕೋಲ್ಕತಾ, ಪುಣೆ ಹಾಗೂ ಚೆನ್ನೈನಲ್ಲಿ ಪ್ರತ್ಯೇಕ ಪ್ರದರ್ಶನ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಈ ಬಾರಿಯ ಚಲನಚಿತ್ರೋತ್ಸವದಲ್ಲಿ ಸಿನಿಮಾ ನಿರ್ಮಾಪಕರಿಗೆ ತಮ್ಮ ಚಿತ್ರಗಳಿಗೆ ಪ್ರಾಯೋಜಕರು ಹಾಗೂ ಖರೀದಿದಾರರನ್ನು ಸಂಪರ್ಕಿಸಲು ಅನುವು ಮಾಡಿಕೊಡಲು ಡಾಕ್ ಫಿಲಂ ಬಾಜರ್ ಎಂಬ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗಿದೆ. ಎರಡು ವರ್ಷಗಳಿಗೊಮ್ಮೆ ಆಯೋಜಿಸಲಾಗುವ ಈ ಚಲನಚಿತ್ರೋತ್ಸವ ಪ್ರಮುಖವಾಗಿ ಸಾಕ್ಷ್ಯಚಿತ್ರ, ಕಿರುಚಿತ್ರ ಹಾಗೂ ಆನಿಮೇಷನ್ ಕೇಂದ್ರಿತವಾಗಿರುತ್ತದೆ.

*****

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಮತ್ತು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರ ಜಾಮೀನು ಅರ್ಜಿ ಕುರಿತ ವಿಚಾರಣೆಯನ್ನು ದೆಹಲಿ ನ್ಯಾಯಾಲಯ ಇದೇ ೧೯ಕ್ಕೆ ನಿಗದಿಪಡಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಲು ಜಾರಿ ನಿರ್ದೇಶನಾಲಯ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಮುಕೇಶ್ ಕುಮಾರ್ ಅವರು ವಿಚಾರಣೆಯನ್ನು ಮುಂದೂಡಿದರು. ಇದೇ ವೇಳೆ, ಕೇಜ್ರಿವಾಲ್ ಅವರ ಆರೋಗ್ಯ ಸ್ಥಿತಿ ಮತ್ತು ಚಿಕಿತ್ಸೆ ಕುರಿತು ರಚಿಸಲಾಗಿರುವ ವೈದ್ಯಕೀಯ ಮಂಡಳಿಯ ಪ್ರಕ್ರಿಯೆಗಳ ಸಮಯದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಲು ತಮ್ಮ ಪತ್ನಿಗೆ ಅವಕಾಶ ನೀಡಬೇಕೆಂದು ಕೋರಿ ಅರವಿಂದ್ ಕೇಜ್ರಿವಾಲ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ಇಂದು ಕೈಗೆತ್ತಿಕೊಳ್ಳಲಿದೆ.

*****

ಸಿರಿಲ್ ರಾಮಫೋಸಾ ಅವರು ತಮ್ಮ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಂಓಅ) ಮತ್ತು ವಿರೋಧ ಪಕ್ಷಗಳ ನಡುವಿನ ಮಹತ್ವದ ಮೈತ್ರಿ ಒಪ್ಪಂದದ ಬಳಿಕ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ. ೪೦೦ ಸದಸ್ಯ ಬಲದ ಸದನದಲ್ಲಿ ೭೧ ವರ್ಷದ ರಮಾಫೋಸಾ ಅವರು ೨೮೩ ಮತಗಳನ್ನು ಪಡೆದುಕೊಂಡರೆ, ಪ್ರತಿಸ್ಪರ್ಧಿ ಎಡಪಕ್ಷದ ಜೂಲಿಯಸ್ ಮಲೆಮಾ ಕೇವಲ ೪೪ ಮತಗಳಿಗೆ ಸೀಮಿತಗೊಂಡರು. ಕಳೆದ ತಿಂಗಳು ನಡೆದ ಚುನಾವಣೆಯಲ್ಲಿ, ಆಫ್ರಿಕನ್ ನ್ಯಾಶನಲ್

ಕಾಂಗ್ರೆಸ್‌ನ ಮತ ಹಂಚಿಕೆಯು ಶೇಕಡ ೪೦ಕ್ಕೆ ಇಳಿದಿದೆ, ಆದರೆ ಡೆಮಾಕ್ರಟಿಕ್ ಅಲೈಯನ್ಸ್ ಶೇಕಡ ೨೨ರಷ್ಟು ಮತಗಳೊಂದಿಗೆ ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

*****

ರಾಷ್ಟ್ರಪತಿ ದ್ರೌಪದಿ ಮುರ್ಮು ನಿನ್ನೆ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಒಡಿಶಾದ ಪ್ರಮುಖ ಹಬ್ಬಗಳಲ್ಲಿ ಒಂದಾದ ರಾಜಾ ಪರ್ಬ್ ಹಬ್ಬದ ಆಚರಣೆಯಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ, ಅವರು ರಾಜ ಗೀತ ಮತ್ತು ಮಯೂರ್ಭಂಜ್ ಛೌ ನೃತ್ಯ, ಸಂಬಲ್ಪುರಿ ನೃತ್ಯ ಮತ್ತು ಕರ್ಮದಂತಹ ನೃತ್ಯ ಪ್ರದರ್ಶನಗಳನ್ನು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ರಾಜ ಪರ್ಬ ಹಬ್ಬವನ್ನು ರಾಷ್ಟ್ರಪತಿ ಭವನದಲ್ಲಿ ಆಚರಿಸಲಾಗುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

*****

೧೮ನೇ ಲೋಕಸಭೆಯ ಚೊಚ್ಚಲ ಅಧಿವೇಶನ ಈ ತಿಂಗಳ ೨೪ ರಿಂದ ಆರಂಭವಾಗಲಿದೆ. ೨೬ರಂದು ಲೋಕಸಭಾಧ್ಯಕ್ಷರ ಚುನಾವಣೆ ನಿಗದಿಯಾಗಿದೆ. ಉಳಿದಂತೆ ಈ ಅಧಿವೇಶನದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ಚುನಾವಣೆಯಲ್ಲಿ ಆಯ್ಕೆಯಾಗಿರುವ ನೂತನ ಸಂಸದರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಲಿದ್ದಾರೆ. ರಾಜ್ಯಸಭೆಯ ಕಲಾಪಗಳು ಈ ತಿಂಗಳ ೨೭ ರಿಂದ ಆರಂಭವಾಗಲಿವೆ. ಉಭಯ ಸದನಗಳ ಕಲಾಪಗಳು ಜುಲೈ ೩ರಂದು ಮುಕ್ತಾಯವಾಗುತ್ತದೆ.

*****

ಸೌದಿ ಅರೇಬಿಯಾದಲ್ಲಿ ಇಂದು ಭಾರತ ಸೇರಿದಂತೆ ವಿಶ್ವದಾದ್ಯಂತ ಎರಡು ಮಿಲಿಯನ್ ಜನರು ಹಜ್ ಯಾತ್ರೆ ಕೈಗೊಳ್ಳಲಿದ್ದಾರೆ. ಐದು ದಿನಗಳ ಹಜ್ ವಿಧಿವಿಧಾನಗಳ ಆರಂಭದ ನಂತರ ಯಾತ್ರಿಕರು ನಿನ್ನೆ ಮಿನಾದಲ್ಲಿ ಸೇರಿದರು. ಮುಂಜಾನೆ ಪ್ರಾರ್ಥನೆಯನ್ನು ಸಲ್ಲಿಸಿದ ನಂತರ, ಅವರು ಇಂದು ಹಜ್‌ನ ಮುಖ್ಯ ಆಚರಣೆಗಾಗಿ ಅರಾಫತ್‌ಗೆ ತೆರಳಲಿದ್ದಾರೆ. ಭಾರತದಿಂದ ಒಂದು ಲಕ್ಷದ ೭೫ ಸಾವಿರಕ್ಕೂ ಹೆಚ್ಚು ಯಾತ್ರಾರ್ಥಿಗಳು ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ವರ್ಷ ಅತಿ ಹೆಚ್ಚು ಐದು ಸಾವಿರ ಭಾರತೀಯ ಮಹಿಳಾ ಯಾತ್ರಿಕರು ಮೆಹ್ರಮ್ ಅಥವಾ ಪುರುಷ ಪಾಲಕರಿಲ್ಲದೆ ಹಜ್ ನಿರ್ವಹಿಸುತ್ತಿದ್ದಾರೆ.

*****

ಐಸಿಸಿ ಪುರುಷರ ಟಿ ೨೦ ವಿಶ್ವಕಪ್ ಕ್ರಿಕೆಟ್‌ನಲ್ಲಿ, ನಿನ್ನೆ ಲಾಡರ್‌ಹಿಲ್‌ನ ಸೆಂಟ್ರಲ್ ಬ್ರೋವರ್ಡ್ ರೀಜನಲ್ ಪಾರ್ಕ್ ಸ್ಟೇಡಿಯಂನಲ್ಲಿ ನಡೆಯಬೇಕಿದ್ದ ಐರ್ಲೆಂಡ್ ಮತ್ತು ಅಮೆರಿಕ ನಡುವಿನ ಎ ಗುಂಪಿನ ಪಂದ್ಯ ಮಳೆಯಿಂದಾಗಿ ಒಂದು ಎಸೆತ ಕಾಣದೆ ರದ್ದಾಯಿತು. ಇದರ ಬೆನ್ನಲ್ಲೇ ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಲಾಗಿದ್ದು, ಅಮೆರಿಕ ಸೂಪರ್ ಎಂಟರ ಹಂತಕ್ಕೆ ತಲುಪಿದೆ. ಕ್ರಿಕೆಟ್ ಇತಿಹಾಸದಲ್ಲಿ ಅಮೆರಿಕ ಈ ಹಂತ ಪ್ರವೇಶಿಸಿರುವುದು ಇದೇ ಮೊದಲ ಬಾರಿಯಾಗಿದ್ದು, ಭಾರತದ ನಂತರ ಎ ಗುಂಪಿನಿಂದ ಮುಂದಿನ ಹಂತವನ್ನು ತಲುಪಿದ ಎರಡನೇ ತಂಡ ಇದಾಗಿದೆ. ಮಾಜಿ ಚಾಂಪಿಯನ್ ಪಾಕಿಸ್ತಾನ ಮತ್ತು ಐರ್ಲೆಂಡ್ ಸೂಪರ್ ಎಂಟು ಸ್ಪರ್ಧೆಯಿಂದ ಹೊರಬಿದ್ದಿವೆ. ಇಂದು ಫ್ಲೋರಿಡಾದ ಸೆಂಟ್ರಲ್ ಬ್ರೋವರ್ಡ್ ಪಾರ್ಕ್ ಸ್ಟೇಡಿಯಂನಲ್ಲಿ ಭಾರತ ತನ್ನ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಕೆನಡ ವಿರುದ್ಧ ಸೆಣಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

*****

ಭಾರತದ ಟೆನಿಸ್ ಆಟಗಾರ ಸುಮಿತ್ ನಗಾಲ್ ಇಟಲಿಯ ಪೆರುಗಿಯಾದಲ್ಲಿ ನಡೆಯುತ್ತಿರುವ ಎಟಿಪಿ ಚಾಲೆಂಜರ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ಗೆ ತಲುಪಿದ್ದಾರೆ. ಪೆರುಗಿಯಾದಲ್ಲಿ ನಿನ್ನೆ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಸುಮಿತ್ ೬-೪, ೭-೫ರಲ್ಲಿ ಪೋಲೆಂಡ್‌ನ ಮಾರ್ಕ್ಸ್ ಕಸ್ನಿಕೋಸ್ಕಿ ಅವರನ್ನು ಸೋಲಿಸಿದರು. ಆರನೇ ಶ್ರೇಯಾಂಕದ ನಾಗಲ್ ೧೦ ದಿನಗಳಲ್ಲಿ ಸತತ ಎಂಟನೇ ಪಂದ್ಯವನ್ನು ಗೆದ್ದು ತಮ್ಮ ಆಟವನ್ನು ಮುಂದುವರೆಸಿದ್ದಾರೆ. ಫ್ರೆಂಚ್ ಓಪನ್ ಮತ್ತು ಹೈಲ್‌ಬ್ರಾನ್ ಚಾಲೆಂಜರ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ನಂತರ ನಾಗಲ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ೭೭ ನೇ ಸ್ಥಾನಕ್ಕೆ

ಏರಿದ್ದಾರೆ. ಅವರು ತಮ್ಮ ಸಿಂಗಲ್ಸ್ ಶ್ರೇಯಾಂಕದ ಆಧಾರದ ಮೇಲೆ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದ್ದಾರೆ. ಇಂದು ನಗಾಲ್ ಸೆಮಿಫೈನಲ್‌ನಲ್ಲಿ ಶ್ರೇಯಾಂಕ ರಹಿತ ಸ್ಪೇನ್‌ನ ಬರ್ನಾಬೆ ಝುಪಾಟಾ ಮಿರಾಲ್ಲೆಸ್ ಅವರನ್ನು ಎದುರಿಸಲಿದ್ದಾರೆ.

*****

ಯುರೋ ಕಪ್ ೨೦೨೪ ರಲ್ಲಿ, ಕಳೆದ ರಾತ್ರಿ ಮ್ಯೂನಿಚ್‌ನ ಅಲಿಯಾನ್ಸ್ ಅರೆನಾ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಜರ್ಮನಿ ೫-೧ ಗೋಲುಗಳಿಂದ ಸ್ಕಾಟ್‌ಲ್ಯಾಂಡ್ ತಂಡವನ್ನು ಪರಾಭವಗೊಳಿಸಿದೆ. ಇದು ಯುರೋಪಿಯನ್ ಚಾಂಪಿಯನ್‌ಶಿಪ್ ಇತಿಹಾಸದಲ್ಲಿ ಅತಿದೊಡ್ಡ ಆರಂಭಿಕ ವಿಜಯವಾಗಿದೆ.ಆತಿಥೇಯರ ಪರ ಮೊದಲಾರ್ಧದಲ್ಲಿ ಕೈ ಹಾವರ್ಟ್ಜ್, ಫ್ಲೋರಿಯನ್ ವಿರ್ಟ್ಜ್ ಮತ್ತು ಜಮಾಲ್ ಮುಸಿಯಾಲ ಗೋಲು ಗಳಿಸಿದರು. ನಂತರ, ನಿಕ್ಲಾಸ್ ಫುಲ್‌ಕ್ರುಗ್ ಮತ್ತು ಎಮ್ರೆ ಕ್ಯಾನ್ ದ್ವಿತೀಯಾರ್ಧದಲ್ಲಿ ಮುನ್ನಡೆಯನ್ನು ಹಿಗ್ಗಿಸಿದರು. ೮೭ನೇ ನಿಮಿಷದಲ್ಲಿ ಆಂಟೋನಿಯೊ ರುಡಿಗರ್ ಗಳಿಸಿದ ಸೆಲ್ಫ್ ಗೋಲು ಸ್ಕಾಟ್ಲೆಂಡ್ ಅಭಿಮಾನಿಗಳಿಗೆ ಸಮಾಧಾನ ತಂದಿತು. ಇಂದು ನಡೆಯಲಿರುವ ಎ ಗುಂಪಿನ ಪಂದ್ಯದಲ್ಲಿ ಹಂಗೇರಿ, ಸ್ವಿಟ್ಜರ್‌ಲ್ಯಾಂಡ್ ಅನ್ನು ಮತ್ತು ಬರ್ಲಿನ್‌ನಲ್ಲಿ ನಡೆಯುವ ಬಿ ಗುಂಪಿನ ಪಂದ್ಯದಲ್ಲಿ ಸ್ಪೇನ್ ಕ್ರೊಯೇಷಿಯಾವನ್ನು ಎದುರಿಸಲಿದೆ.

**END**